# ವಾರ್ಡ್ ಸಭೆ ಸಂಖ್ಯೆ.46

ದಿನಾಂಕ:24.11.2022 ರಂದು ಸಮಯ 11:30 ಗಂಟೆಗೆ ವಾರ್ಡ್.ಸಂಖ್ಯೆ.50 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಕಾರ್ಯದರ್ಶಿಗಳು) ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀ ಎಸ್.ಆರ್ ಶ್ರೀನಿವಾಸ್ ನೋಡಲ್ ಅಧಿಕಾರಿ ರವರು, ವಾರ್ಡ್.ಸಂಖ್ಯೆ.50, ಮಾರಪ್ಪನಪಾಳ್ಯ. **(ಅಧ್ಯಕ್ಷರು)**
2. ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.50, ಮಾರಪ್ಪನಪಾಳ್ಯ. **(ಕಾರ್ಯದರ್ಶಿ)**
3. ಶ್ರೀ ಜಿ.ಕೆ ವೆಂಕಟೇಶ್ ಕೆಲಸ ಪರಿವೀಕ್ಷಕರು, ವಾರ್ಡ್ ಸಂಖ್ಯೆ.50, ಮಾರಪ್ಪನಪಾಳ್ಯ.
4. ಡಾ॥ ಶ್ರೀ ಶಶಿಕುಮಾರ್ ಎಸ್.ಆರ್ ಆರೋಗ್ಯ ವೈಧ್ಯಾಧಿಕಾರಿಗಳು ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ.
5. ಶ್ರೀ ಪ್ರದೀಪ್‌ಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.50, ಮಾರಪ್ಪನಪಾಳ್ಯ.
6. ಶ್ರೀ ಓಂಪ್ರಕಾಶ್ ತೋಟಗಾರಿಕೆ ಅಧೀಕ್ಷಕರು, ವಾರ್ಡ್ ಸಂಖ್ಯೆ.50, ಮಾರಪ್ಪನಪಾಳ್ಯ.
7. ಶ್ರೀ ಶಿವರಾಂ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ವಾರ್ಡ್ ಸಂಖ್ಯೆ.50, ಮಾರಪ್ಪನಪಾಳ್ಯ.
8. ಶ್ರೀ ಲೋಕೇಶ್, ಪಶು ಸಂಗೋಪನಾ ಪರಿವೀಕ್ಷಕರು, ವಾರ್ಡ್ ಸಂಖ್ಯೆ.50, ಮಾರಪ್ಪನಪಾಳ್ಯ.
9. ಶ್ರೀ ಬಿ.ಬಿ ರಾಜು, ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆ ಅಧಿಕಾರಿ.
10. ಶ್ರೀ ಪ್ರದೀಪ್ ಎಸ್.ಎ, ನಂದಿನಿ ಲೇಔಟ್ ಪೊಲೀಸ್ ಠಾಣೆ ಅಧಿಕಾರಿ.
11. ಶ್ರೀ ಮಹದೇವ ಗುತ್ತಿಗೆದಾರರು ಬೀದಿ ದೀಪ ಬಿ.ಬಿ.ಎಂ.ಪಿ
12. ಶ್ರೀ ರಾಜೇಶ್. ಸದಸ್ಯರು.
13. ಶ್ರೀ. ಗೋಪಿ, ಸದಸ್ಯರು
14. ಶ್ರೀ. ಛಾಯಾಪತಿ ಎಂ. ಕಿರಿಯ ಆರೋಗ್ಯ ಪರಿವೀಕ್ಷಕರು, ಬಿಬಿಎಂಪಿ
15. ಶ್ರೀ ನಿಂಗರಾಜು ಕಂದಾಯ ಪರಿವೀಕ್ಷಕರು,
16. ಶ್ರೀ. ಪುಟ್ಟಸ್ವಾಮಿ ಸದಸ್ಯರು,

ಕಾರ್ಯದರ್ಶಿರವರು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು

| ಕ್ರ.ಸಂ | ವಿವರಣೆ | ಕ್ರಮ |
|---|---|---|
| 01 | ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 02 | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 03 | ವಿಜಯಾನಂದನಗರ ಮುಖ್ಯರಸ್ತೆಯಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಇರುವ ಮನೆಗೆ ನೀರಿನ ಬಿಲ್ಲು ಹೆಚ್ಚಾಗಿ ಬಂದಿರುವುದರಿಂದ ಕಾರಣವೇನು ಎಂಬುದಕ್ಕೆ ಮಾಹಿತಿ ನೀಡಲು ಡಾ॥ ನಾಗೇಂದ್ರ ಕೋರಿರುತ್ತಾರೆ. ಇದರ ಬಗ್ಗೆ ಶ್ರೀ.ಸೋಮನಾಥ್, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ಮುಂದಿನ ಸಭೆಗೆ ಸದರಿ ವಿಷಯದ ಬಗ್ಗೆ ವಿಸ್ತೃತವಾದ ವರದಿಯನ್ನು ಸಲ್ಲಿಸಲಾಗುವುದು ಎಂದು ಸಭೆಗೆ ತಿಳಿಸಿದರು. | ಬಿ.ಡ್ಬ್ಲ್ಯೂ.ಎಸ್.ಎಸ್. ಬಿ. ಅಧಿಕಾರಿಗಳು |
| 04 | ಕಣ್ವ ಆಸ್ಪಿಟಲ್ ರಸ್ತೆ ಮತ್ತು ಟಯೋಟಾ ಶೋ ರೂಂ ರಸ್ತೆಗಳಲ್ಲಿ ವಾಹನಗಳನ್ನು ರಸ್ತೆಯ ಬದಿಯಲ್ಲಿಯೆ ನಿಲ್ಲಿಸಿರುವುದನ್ನು ತೆರವುಗೊಳಿಲು ಸಭೆಗೆ ಡಾ॥ನಾಗೇಂದ್ರರವರು ಮತ್ತು ಸಾರ್ವಜನಿಕರು ಕೋರಿದರು ಅದಕ್ಕೆ ಸಂಬಧಪಟ್ಟ ಪೊಲೀಸ್ ಅಧಿಕಾರಿಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ಮಹಿತಿ ನೀಡಲಾಗುವುದು ಎಂದು ತಿಳಸಿದರು | ಟ್ರಾಫಿಕ್ ಪೊಲೀಸ್ ರಾಜಾಜಿನಗರ |
| 05 | ಕೃಷ್ಣಾನಂದನಗರ ವೃತ್ತದಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ ಶಾಲಾ ಸಮಯದಲ್ಲಿ ಪೊಲೀಸ್ ನಿರ್ವಹಣೆ ಅವಶ್ಯಕವಾಗಿರುತ್ತದೆ ಆದ್ದರಿಂದ ಸಂಬಂಧಪಟ್ಟ ಠಾಣೆಗೆ ವಿಷಯ ತಿಳಿಸಲು ಸಭೆಯಲ್ಲಿ ಒಕ್ಕೂರಲಾಗಿ ಎಲ್ಲಾ ಸದಸ್ಯರು ಮನವಿ ಮಾಡಿರುತ್ತಾರೆ. | ರಾಜಾಜಿನಗರ ಸಂಚಾರಿ ಠಾಣೆ |
| 06 | ಸಂಚಾರಿ ಪೋಲೀಸ್ ಠಾಣೆ ಯಶವಂತಪುರರವರಿಗೆ ಕಿಯಾ ಮೋಟರ್ಸ್ ಬಳಿ ನೋ–ಪಾರ್ಕಿಂಗ್ ಬೋರ್ಡ್ ಅಳವಡಿಸಲು ಎಲಿನಾ ವಸತಿ ಗೃಹದ ನಿವಾಸಿಗಳು ಕೋರಿರುತ್ತಾರೆ | ಯಶವಂತಪುರ ಸಂಚಾರಿ ಪೋಲೀಸ್ ಠಾಣೆ |
| 07 | ಕಸ ನಿರ್ವಹಣೆ ಮತ್ತು ಬ್ಲಾಕ್ ಸ್ಪಟ್ ತೆರವು ಕಾರ್ಯಚರಣೆ ಮತ್ತು ಶಂಕರನಗರ ಮುಖ್ಯರಸ್ತೆ ಹಾಗೂ ಉಲ್ಲಾಸ್ ರಸ್ತೆ ಬದಿಯ ವ್ಯಾಪಾರಿಗಳು ಮಧ್ಯರಾತ್ರಿಯಲ್ಲಿ ಕೂಗಿಕೊಂಡು ವ್ಯಾಪಾರ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ಹಾಗೂ ಸ್ಥಳೀಯ ನಿವಾಸಿಗಳಿಗೆ, ವಿದ್ಯಾರ್ಥಿಗಳಿಗೆ, ಚಿಕ್ಕಮಕ್ಕಳಿಗೆ | ಆರೋಗ್ಯ ಇಲಾಖೆ |

| | | |
|---|---|---|
| | ನಿದ್ರಾಭಂಗವಾಗುತ್ತಿರುವುದರಿಂದ ಸದರಿ ಮಾರುಕಟ್ಟೆಯ ವ್ಯವಸ್ಥೆಯನ್ನು ಸ್ಥಳಾಂತರಿಸಲು ವಾರ್ಡ್ ಸಮಿತಿಯ ಎಲ್ಲಾ ಸದಸ್ಯರುಗಳು ಒಕ್ಕೊರಲಾಗಿ ಕೋರಿರುತ್ತಾರೆ. | |
| 08 | ಲಾರಿ ಸ್ಟ್ಯಾಂಡ್ ರಸ್ತೆಯ ನಂಜುಂಡೇಶ್ವರ ಹೆಬ್ಬಾಗಿಲು ಬಳಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರ ಪೈಪ್ ಲೈನ್ ಎತ್ತರವಾಗಿರುತ್ತದೆ, ಇದರಿಂದ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ಓಡಾಡುವ ಸಮಯದಲ್ಲಿ ಹಾನಿ ಉಂಟುಮಾಡುವ ಸಾದ್ಯತೆ ಇರುವುದರಿಂದ ಸದರಿ ಕೊಳವೆಯನ್ನು ದುರಸ್ಥಿಗೊಳಿಸಲು ಡಾ:ನಾಗೇಂದ್ರ ರವರು ಸಭೆಗೆ ಕೋರಿರುತ್ತಾರೆ. | ಬಿ.ಡಬ್ಲ್ಯೂ.ಎಸ್.ಎಸ್. ಬಿ. ಅಧಿಕಾರಿಗಳು |
| 09 | ಶಂಕರನಗರ ಮುಖ್ಯರಸ್ತೆ ಅಶೋಕ ಹೈಟ್ಸ್ ಬಳಿ ಇರುವ ಬೆಸ್ಕಂ ಟ್ರಾನ್ಸ್‌ಫರಂನ್ನು ಸ್ಥಳಾಂತರಿಸಲು ಡಾ॥ನಾಗೇಂದ್ರರವರು ಕೋರಿರುತ್ತಾರೆ. | ಬೆಸ್ಕಂ ಇಲಾಖೆ |
| 10 | ಶಂಕರನಗರ ಗಣೇಶ ದೇವಸ್ಥಾನ ಪಾರ್ಕ್‌ನಲ್ಲಿರುವ ಕಸವನ್ನು ತೆರವುಗೊಳಿಸುವಂತೆ ರಾಜೇಶ್ ಮತ್ತು ನಟರಾಜ್ ಎಂಬುವರು ಸಭೆಯಲ್ಲಿ ತಿಳಿಸಿರುತ್ತಾರೆ. | ತೋಟಗಾರಿಕೆ ಇಲಾಖೆ |
| 11 | ವಾರ್ಡ್ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆ ಬಗ್ಗೆ ಮಾಹಿತಿಯನ್ನು ಡಾ॥ನಾಗೇಂದ್ರ ರವರು ಸಭೆಗೆ ಕೋರಿರುತ್ತಾರೆ. | ತೋಟಗಾರಿಕೆ ಇಲಾಖೆ |
| 12 | ಕಾರ್ಯದರ್ಶಿಗಳು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನಗಳನ್ನು ಹೇಳುತ್ತ ಸಭೆಯನ್ನು ಮುಕ್ತಾಯಗೊಳಿಸಿದರು. | – |

24/11/22

ನೋಡಲ್ ಅಧಿಕಾರಿ

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.50
ಮಾರಪ್ಪನಪಾಳ್ಯ